# Narmada Jhabua Gramin Bank, Indore

आपका अपना बैंक

(A Joint Venture of Govt. of India, M.P. Govt. & Bank of India)

**Education Loan**



**Home Loan**



**Personal Loan**



**Locker Facility**



**Retail Trade Loan**



**KCC Loan Facility**



**More than 350 Fully Computerised Branches**

**Winner of Inclusive Finance India Award for year 2014**

## Deposit Schemes of Our Bank

- Current Deposit
- Saving Deposit
- FDR/DBD ( Quarterly compunding interest)
- Recurring / Flexi Recurring
- Monthly/Quarterly Income Deposit (MIC/QIC)
- Sunidhi Deposit scheme (Tax Saving Deposit Scheme) etc.

## Loan Schemes of Our Bank

- Home Loan
- Mortgage Loan
- Business Loan – (with CC/OD Limit)
- Education Loan
- Micro Finance
- Vehicle & SRTO Loan
- Personal Loan
- Consumer Loan
- SHG, JLG, SCC, GCC, ACC, WCC etc..

**Kollegal V. Raghvendra**
Chairman

**Head Office : Arcade Silver, Near Chappan Shop, New Palasia, Indore (M.P.) 452 001**
☎ : (0731) 2549053-56, Fax : (0731) 2432432 • Website : www.njgb.in • Email : njgbhoindore@yahoo.com




# ಆಧುನಿಕ ಭಾರತ ಮತ್ತು ಸನಾತನ ಧರ್ಮ

– ೧ –

'ದಿನದಿಂದ ದಿನಕ್ಕೆ ಜಗತ್ತು ಆಧುನಿಕವಾಗುತ್ತಿದೆ; ಪ್ರತಿ ಕ್ಷಣವೂ ಹೊಸಹೊಸ ಆವಿಷ್ಕಾರವಾಗುತ್ತಿದೆ; ಈ ಕಾಲಘಟ್ಟದಲ್ಲಿ ದೇವರು, ಧರ್ಮ, ವೇದಾಂತ ಎಂದು ಹಳೆಯ ತತ್ತ್ವಗಳ ಕಡೆಗೇ ಮತ್ತೆ ಮತ್ತೆ ಹೊರಳುತ್ತಾರಲ್ಲ!' ಎಂದು ಮೂಗು ಮುರಿಯುವ ಪ್ರವೃತ್ತಿ ಹೆಚ್ಚುತ್ತಿದೆ. ಹೌದು, ಮತ್ತೆ ಅದೇ ಪುರಾತನ ತತ್ತ್ವಗಳ ಕಡೆಗೆ, ಸನಾತನ ಧರ್ಮದ ಕಡೆಗೆ ಭಾರತೀಯ ಮನಸ್ಸು ಹೊರಳುತ್ತಿದೆ ಎಂಬುದೇ ನಿಜವಾಗಿದ್ದರೆ ಅದೊಂದು ಶುಭ ಸೂಚನೆಯೇ ಸರಿ. ಭಾರತ ಆಧುನಿಕವಾದಷ್ಟೂ ತನ್ನ ಹಳೆಯ ಮೌಲ್ಯಗಳನ್ನು ಬಿಡದೆ, ತನ್ನ ಪುರಾತನ ಧರ್ಮ, ಸಂಸ್ಕೃತಿ, ತತ್ತ್ವಗಳಿಗೆ ದೃಢವಾಗಿ ಅಂಟಿಕೊಂಡಿದೆ ಎಂದರೆ ಅದೊಂದು ಅತ್ಯುತ್ತಮ ಸಮತೋಲನವಲ್ಲವೇ? ಆದರೆ ಈ ರೀತಿಯ 'ಸಮರಸ' ಜನಸಾಮಾನ್ಯರಲ್ಲೆಲ್ಲ ವ್ಯಾಪಕಗೊಂಡಿದೆಯೆ?

ಇಂದಿನ ಸಮಾಜವನ್ನು ಎಚ್ಚರದಿಂದ ಗಮನಿಸಿದರೆ, ಇದಕ್ಕೆ 'ಹೌದು' ಮತ್ತು 'ಅಲ್ಲ' ಎಂಬ ಎರಡೂ ಉತ್ತರವನ್ನು ಕೊಡಬಹುದು ಅನ್ನಿಸುತ್ತಿದೆ. ಇದು ಸ್ಪಷ್ಟವಾದ ಉತ್ತರವಲ್ಲ, ನಿಜ. ಆದರೆ ಇಂದಿನ ಸಮಾಜದ ಬಗೆಬಗೆಯ ಮನೋಭಾವ, ಪ್ರವೃತ್ತಿ ಎಷ್ಟೊಂದು ಗೊಂದಲಮಯವೆಂದರೆ, ಅದರ ಸರಳ ವಿಶ್ಲೇಷಣೆ ಅಸಾಧ್ಯವೆಂದೇ ಹೇಳಬೇಕು. ಈ ಹಿನ್ನೆಲೆಯಲ್ಲಿ ವಿಭಿನ್ನ ನೆಲೆಗಳಿಂದ ನೋಡಬೇಕು; ಆಗ ಒಂದಕ್ಕೊಂದು ವಿರುದ್ಧವೆನಿಸುವ ಉತ್ತರ ದೊರಕುತ್ತದೆ.

ಮೊದಲನೆಯದಾಗಿ, ಆಧುನಿಕತೆಗೆ ತನ್ನನ್ನು ತೆರೆದುಕೊಂಡಿರುವ ಭಾರತ, ವಿಭಿನ್ನ ಸಂಸ್ಕೃತಿ, ವಿಚಾರಧಾರೆ, ಜೀವನಕ್ರಮಗಳಿಂದ ಪ್ರಭಾವಿತವಾಗಿದೆ; ತನ್ನ ಸಾಮಾಜಿಕ ಜೀವನಕ್ರಮವನ್ನು ನಿರಂತರ ಬದಲಾಯಿಸುತ್ತಲೇ ಇದೆ. ಇದರೊಂದಿಗೆ ಈ ಪ್ರಭಾವದ ಆಧಿಕ್ಯದಿಂದ ನಾವು ನಮ್ಮತನವನ್ನು, ನಮ್ಮದೇ ಆದ ಬದುಕನ್ನು ಕಳೆದುಕೊಳ್ಳುತ್ತಿದ್ದೇವೆ; ಆದ್ದರಿಂದ ಆಧುನಿಕತೆಯ ಪ್ರಭಾವಕ್ಕೆ ಬಲಿಯಾಗದೆ, ನಮ್ಮ ಸಂಸ್ಕೃತಿ, ಧರ್ಮ, ತತ್ತ್ವ ಪರಂಪರೆಗಳನ್ನು ಉಳಿಸಿಕೊಳ್ಳಬೇಕೆನ್ನುವ ಎಚ್ಚರ, ಪ್ರಯತ್ನ ನಮ್ಮ ನಡುವೆ ನಡೆಯುತ್ತಿದೆ. ಈ ಅರ್ಥದಲ್ಲಿ ನಮ್ಮ ಸಮಾಜದಲ್ಲಿ ಹಳೆಯ–ಹೊಸ ಮೌಲ್ಯಗಳ ಸಾಮರಸ್ಯ ವ್ಯಾಪಕಗೊಳ್ಳುತ್ತಿದೆ ಎನ್ನಬೇಕು.

ಇನ್ನು ಎರಡನೆಯ ಉತ್ತರ: 'ಇಲ್ಲ', ಈ ಸಾಮರಸ್ಯವನ್ನು ಕೆಲವೊಂದು ವರ್ಗದ, ಕೆಲವು ಮಂದಿ ಸಂವೇದನಾಶೀಲ ವ್ಯಕ್ತಿಗಳು ಮಾತ್ರ ಕಂಡುಕೊಳ್ಳುತ್ತಾರೆ; ಸಮಾಜದ ಬಹುಪಾಲು ಜನ ಆಧುನಿಕತೆಯ, ನಗರಕೇಂದ್ರಿತ ಜೀವನಶೈಲಿಯ ಮೌಲ್ಯಗಳಿಗೆ ಮಾರುಹೋಗಿದ್ದಾರೆ. ಆದ್ದರಿಂದ ಈ ಸಾಮರಸ್ಯ ಅತ್ಯಂತ ಸೀಮಿತವಾದದ್ದು; ಹಳೆಯ ಮೌಲ್ಯ, ತತ್ತ್ವಗಳೆಲ್ಲ ತಿರಸ್ಕೃತವಾಗಿವೆ ಎಂಬ ಅಭಿಪ್ರಾಯ.

– ೨ –

ನಮ್ಮ ಸಮಾಜದಲ್ಲಿ ಈ ಎರಡೂ ಬಗೆಯ ಪ್ರವೃತ್ತಿಗಳು ಪ್ರಬಲವಾಗಿವೆ. ಆದರೆ ಒಂದು ಸಂಗತಿ ಸತ್ಯ: ಪ್ರಾಚೀನ ತತ್ತ್ವ, ಧರ್ಮ, ಸಂಸ್ಕೃತಿಯನ್ನು ಮಾತ್ರ ಅವಲಂಬಿಸಿದ ಜೀವನಕ್ರಮ ನಮಗೆ ಸಾಲದು; ಆಧುನಿಕ ಜಗತ್ತಿನ ಹೊಸ ವಿಚಾರಗಳು, ವೈಜ್ಞಾನಿಕ ಆವಿಷ್ಕಾರಗಳು, ನೂತನ ಬದಲಾವಣೆಗಳು ಭಾರತೀಯ ಜೀವನ ಕ್ರಮದಲ್ಲಿ ಅನಿವಾರ್ಯವಾಗಿ ಬರಬೇಕಾಗಿವೆ. ಅಷ್ಟೇ ಮುಖ್ಯವಾಗಿ, ನಮ್ಮಲ್ಲಿ ಪುರಾತನವಾದದ್ದನ್ನೆಲ್ಲ ತ್ಯಜಿಸುವ, ತಿರಸ್ಕರಿಸುವ ಮೂಲಕ ನಾವು 'ಆಧುನಿಕ' ಬದುಕನ್ನು ನಡೆಸಲಾರೆವು; ಇದರಿಂದ ನಮ್ಮ ದೇಶದ ತಾಯಿಬೇರನ್ನೇ ನಾವು ಕತ್ತರಿಸಿ ಹಾಕಿದಂತಾಗುವುದು. ಹಳೆಯ ಮತ್ತು ಹೊಸ ಜೀವನ ಕ್ರಮದ ಸಮ ಪ್ರಮಾಣದ ಸಾಮರಸ್ಯವು ಹಿಂದೆಂದಿಗಿಂತಲೂ ಇಂದು ಅಗತ್ಯವಾಗಿದೆ. ಈ ಪ್ರಸ್ತುತತೆ ನಮ್ಮ ಧರ್ಮ, ಸಂಸ್ಕೃತಿ, ತತ್ತ್ವಗಳ ಹೊಸ ಆವಿಷ್ಕಾರಕ್ಕೆ ಮತ್ತು ಹೊಸ ವ್ಯಾಖ್ಯಾನಕ್ಕೆ ದಾರಿ ಮಾಡುತ್ತದೆ.

ಒಂದರ್ಥದಲ್ಲಿ ಹಿಂದೂಧರ್ಮದ ಮರುವ್ಯಾಖ್ಯಾನ ಹತ್ತೊಂಬತ್ತನೇ ಶತಮಾನದ ಅಂತ್ಯಭಾಗದಲ್ಲೇ ನಡೆಯಿತು. ಆಧುನಿಕ ವಿದ್ಯಾಭ್ಯಾಸ ಪಡೆದ ಹಿಂದೂ ನೇತಾರರು ಹೊಸ ಬಗೆಯ ಧಾರ್ಮಿಕ ಚಳುವಳಿಗಳನ್ನು ಆರಂಭಿಸಿದ್ದು, ಶ್ರೀರಾಮಕೃಷ್ಣ–ವಿವೇಕಾನಂದರ, ಶ್ರೀ ಅರವಿಂದರ ಹಾಗೂ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮೂಡಿಬಂದ ಭಾರತೀಯ ಪರ ಚಿಂತಕರ (ತಿಲಕ್, ಗಾಂಧೀಜಿ ಪ್ರಮುಖರು) ವಿಚಾರಧಾರೆ

ಆಧುನಿಕ ಯುವಜನತೆಯನ್ನು ಪ್ರಭಾವಿಸಿದ್ದು ಐತಿಹಾಸಿಕ ಸಂಗತಿ. ಇವು ಭಾರತೀಯ ಪರಂಪರೆ, ಸಂಸ್ಕೃತಿಗಳ ಪುನರುತ್ಥಾನಕ್ಕೆ ಕಾರಣವಾದರೂ, ಆಧುನಿಕತೆ ಹಲವು ರಂಗಗಳ ಮೂಲಕ ನಮ್ಮ ಜನಜೀವನವನ್ನು ಪ್ರವೇಶಿಸುವ ಮತ್ತು ಪ್ರಭಾವಗೊಳಿಸುವ ಪ್ರಕ್ರಿಯೆ ಅವ್ಯಾಹತವಾಗಿ ಮುಂದುವರೆಯಿತು; ಯಾವ ಚಳುವಳಿಗೂ ಅದನ್ನು ತಡೆಯಲಾಗಲಿಲ್ಲ. ಅನಿವಾರ್ಯವಾಗಿ ನಡೆದ ಈ ಬದಲಾವಣೆಯಿಂದಾಗಿ ನಮ್ಮ ಸಮಾಜ ವಿಶಾಲದೃಷ್ಟಿಯನ್ನು ಪಡೆಯಿತು, ಸಮೃದ್ಧಗೊಂಡಿತು. ಅದರೊಂದಿಗೆ ಹಲವು ಬಗೆಯಲ್ಲಿ ಸಾಂಸ್ಕೃತಿಕ ಹಿನ್ನಡೆ ಉಂಟಾಯಿತೆನ್ನುವುದೂ ನಿಜ.

ಈಚಿನ ವರ್ಷಗಳಲ್ಲಿ, ವಿಶೇಷವಾಗಿ ಕಂಪ್ಯೂಟರ್, ಮೊಬೈಲ್, ಟಿ.ವಿ. ಮೊದಲಾದ ಸಂಪರ್ಕ ಮಾಧ್ಯಮಗಳ ಪ್ರಭಾವ ದಟ್ಟವಾಗುತ್ತಿರುವ ಈ ಕಾಲಘಟ್ಟದಲ್ಲಿ ಭಾರತೀಯ ಸಂಸ್ಕೃತಿ, ಧರ್ಮ, ತತ್ತ್ವ, ಪರಂಪರೆಗಳ ವಿರುದ್ಧ ಪ್ರಚಾರ ನೇರ ಹಾಗೂ ಪರೋಕ್ಷವಾಗಿ ನಡೆಯುತ್ತಿದೆ. ಇದಕ್ಕೆ ಹಿನ್ನೆಲೆಯಾಗಿ ರಾಜಕೀಯ–ಆರ್ಥಿಕ ಧ್ರುವೀಕರಣ, ಜಾಗತಿಕ ವ್ಯಾಪಾರೀಕರಣ, ಜಾಹೀರಾತು ಮುಂತಾದ ಮಾಧ್ಯಮಗಳ ಪೈಪೋಟಿ – ಇವೆಲ್ಲ ಕೆಲಸ ಮಾಡುತ್ತಿವೆ. ಇವು ಮಾನವ ಸ್ವಭಾವವನ್ನು ಅರಿತೋ ಅರಿಯದೆಯೋ ಸಂದೇಹವಾದದತ್ತ, ನಾಸ್ತಿಕ ಪ್ರವೃತ್ತಿಯತ್ತ ವಾಲುವಂತೆ ಮಾಡುತ್ತಿವೆ. ಆರಂಭದಲ್ಲಿ ಹೇಳಿದ 'ಮೂಗು ಮುರಿಯುವ' ಪ್ರವೃತ್ತಿ ಇಂಥ ಸನ್ನಿವೇಶದಲ್ಲೇ ಮೂಡಿಬರುತ್ತದೆ.

ಆದರೆ ಭಾರತದ ಇತಿಹಾಸದುದ್ದಕ್ಕೂ ಕಂಡುಬರುವ ಒಂದು ಅತ್ಯದ್ಭುತ ಶಕ್ತಿ – ಸಾಂಸ್ಕೃತಿಕ ಸಮತೋಲನ. ಯಾವ ಕ್ಷೇತ್ರದಲ್ಲಿ ಏರುಪೇರಾದರೂ ಸಂಸ್ಕೃತಿ ತನ್ನ ಮೂಲದಿಂದ ಎದ್ದು ನಿಲ್ಲುತ್ತದೆ; ಏರುಪೇರನ್ನು ಅಲ್ಲೋಲಕಲ್ಲೋಲಗೊಳಿಸಿ ಸಮಾಜದ ಸಮತೋಲನವನ್ನು ನೆಲೆನಿಲ್ಲಿಸುತ್ತದೆ. ವೇದಕಾಲದಿಂದೀಚೆಗೆ ಭಾರತದ ಮೇಲೆ ನಿರಂತರವಾಗಿ ನಡೆದ ವಿದೇಶೀ ಆಕ್ರಮಣಗಳಿಂದ ಸಾಂಸ್ಕೃತಿಕ, ಸಾಮಾಜಿಕ ಜನಜೀವನ ಹಲವು ಬಾರಿ ಏರುಪೇರಾಯಿತು; ಆದರೆ ನಮ್ಮ ಸಂಸ್ಕೃತಿ ಅದನ್ನೆಲ್ಲ ಜೀರ್ಣಿಸಿಕೊಂಡು ತನ್ನ ಸಮತೋಲನವನ್ನು ಉಳಿಸಿಕೊಂಡಿತು. ಈಚೆಗೆ ಮತ್ತೆ ನಮ್ಮ ಸಮಾಜ ತನ್ನ ಸಾಂಸ್ಕೃತಿಕ ಮೂಲವನ್ನು ಮರೆತು ದೂರ ಸರಿದರೆ, ನಮ್ಮ ಸಂಸ್ಕೃತಿಯ ಆಳದಿಂದಲೇ ಅದಕ್ಕೆ ಪ್ರಬಲವಾದ ಪ್ರತಿಕ್ರಿಯೆ ಬರುವುದು; ಮತ್ತೆ ಸಮತೋಲನ ಸ್ಥಾಪಿಸಲ್ಪಡುವುದು. ಇದು ಭಾರತದ ವೈಶಿಷ್ಟ್ಯ.

– ೩ –

ನಮ್ಮ ಸಂಸ್ಕೃತಿಯಲ್ಲಿ ಈ ಸಮತೋಲನ ಸಾಧ್ಯವಾಗಿರುವುದು ಅದರ ಆಧ್ಯಾತ್ಮಿಕ ಸ್ವರೂಪದಿಂದಾಗಿ. ನಮ್ಮಲ್ಲಿ ಮಾನವನ ಬದುಕಿಗೂ, ಆದರ್ಶಕ್ಕೂ, ಅವನ ಗೊತ್ತುಗುರಿಗೂ ಒಂದು ಆಧಾರವನ್ನು ಒದಗಿಸಿರುವುದೇ ಸನಾತನ ಧರ್ಮ. ಇದರ ವೈಶಿಷ್ಟ್ಯವನ್ನು ಕುರಿತು ಸ್ವಾಮಿ ವಿವೇಕಾನಂದರು **'ಹಿಂದೂ ಧರ್ಮ ಮತ್ತು ಶ್ರೀರಾಮಕೃಷ್ಣ'** ಎಂಬ ಲೇಖನದಲ್ಲಿ ಹೇಳುತ್ತಾರೆ:

**'' 'ಸತ್ಯ'ದಲ್ಲಿ ಎರಡು ವಿಧಗಳಿವೆ. ಒಂದನೆಯದು, ಮಾನವನ ಸಾಧಾರಣ ಇಂದ್ರಿಯಗಳಿಗೆ ಗ್ರಾಹ್ಯವಾದುದು ಮತ್ತು ಇಂದ್ರಿಯಜ್ಞಾನವನ್ನು ಆಧರಿಸಿದ ತರ್ಕವನ್ನು ಅವಲಂಬಿಸಿದುದು. ಎರಡನೆಯದು ಸೂಕ್ಷ್ಮವಾದ ಯೋಗಶಕ್ತಿಯಿಂದ ಗ್ರಾಹ್ಯವಾದುದು. ಒಂದನೆಯದರ ಸಹಾಯದಿಂದ ಸಂಗ್ರಹಿಸಲಾದ ಜ್ಞಾನವನ್ನು 'ವಿಜ್ಞಾನ' ಎಂದು ಕರೆಯುತ್ತೇವೆ. ಎರಡನೆಯದರ ಸಹಾಯದಿಂದ ವೇದ್ಯವಾದ ಜ್ಞಾನವನ್ನು 'ವೇದಗಳು' ಎಂದು ಕರೆಯುತ್ತೇವೆ. ವೇದಗಳೆಂದು ಕರೆಯಲ್ಪಡುವ, ಅನಾದಿಯೂ ಅನಂತವೂ ಆದ ಇಂದ್ರಿಯಾತೀತ ಸತ್ಯಗಳು ಅನವರತವೂ ಅಸ್ತಿತ್ವದಲ್ಲಿವೆ. ಈ ಸತ್ಯಗಳ ಸಹಾಯದಿಂದಲೇ ಸ್ವಯಂ ಸೃಷ್ಟಿಕರ್ತನು ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಳಯ ಕಾರ್ಯಗಳನ್ನು ನಡೆಸುತ್ತಿದ್ದಾನೆ. ಈ ಅತೀಂದ್ರಿಯ ಶಕ್ತಿ ಯಾವ ವ್ಯಕ್ತಿಯಲ್ಲಿ ಅಭಿವ್ಯಕ್ತವಾಗುವುದೋ ಅವನಿಗೆ 'ಋಷಿ' ಎಂದು ಹೆಸರು; ಮತ್ತು ಈ ಶಕ್ತಿಯ ಸಹಾಯದಿಂದ ಅವನು ಯಾವ ಅಲೌಕಿಕ ಸತ್ಯಗಳನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವನೋ ಆ ಸತ್ಯಗಳಿಗೆ 'ವೇದಗಳು' ಎಂದು ಹೆಸರು.''**

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೫, ಪು. ೩೮೩)*

ಸ್ವಾಮೀಜಿ ಮುಂದುವರಿದು ಹೇಳುತ್ತಾರೆ:

**''ಈ ವೇದರಾಶಿಯು ಜ್ಞಾನಕಾಂಡ, ಕರ್ಮಕಾಂಡಗಳೆಂದು ಎರಡು ಭಾಗಗಳಾಗಿವೆ. ಕರ್ಮಕಾಂಡದಲ್ಲಿರುವ ಕ್ರಿಯೆ ಮತ್ತು ಅದರಿಂದ ಹುಟ್ಟುವ ಫಲಗಳು ಮಾಯಾಜಗತ್ತಿಗೆ ಸೀಮಿತವಾಗಿವೆ. ಅವು ದೇಶ ಕಾಲ ಪಾತ್ರಾದಿ ನಿಯಮಾಧೀನವಾಗಿ ಹಿಂದೆ ಪರಿವರ್ತನೆ ಹೊಂದಿದವು; ಇಂದೂ ಹೊಂದುತ್ತಿವೆ; ಮುಂದೆಯೂ ಹೊಂದುವುವು.**

**''ಸಾಮಾಜಿಕ ರೀತಿನೀತಿಗಳೂ ಕೂಡ ಈ ಕರ್ಮಕಾಂಡದ ಮೇಲೆಯೇ ನಿಂತಿರುವುದರಿಂದ ಅವು ಕಾಲಕಾಲಕ್ಕೆ ಪರಿವರ್ತನೆ ಹೊಂದುತ್ತಲೇ ಇರುವುವು; ಹೊಂದಲೇಬೇಕು. ಸತ್‌ಶಾಸ್ತ್ರ ಮತ್ತು ಸದಾಚಾರಗಳಿಗೆ ಮತ್ತು ಸಂತರ ಜೀವನಾದರ್ಶಗಳಿಗೆ ಅವಿರೋಧವಾಗಿರುವ ಲೋಕಾಚಾರಗಳು ಮಾತ್ರ ಆಯಾಕಾಲದಲ್ಲಿ ಸ್ವೀಕೃತವಾಗುತ್ತಿರುವುವು. ಶಾಸ್ತ್ರದ ಮೂಲೋದ್ದೇಶಗಳಿಗೂ, ಸಂತರ ನಡೆನುಡಿಗಳಿಗೂ ವಿರೋಧವಾದ ಆಚರಣೆಗಳ ಅಂಧಾನುಕರಣೆಯೇ ಆರ್ಯರ ಅಧಃಪತನಕ್ಕೆ ಬಹು ಮುಖ್ಯವಾದ ಕಾರಣವಾಯಿತು.**

**''ಜ್ಞಾನಕಾಂಡ ಅಥವಾ ವೇದಾಂತವು ಮಾತ್ರವೇ ಸರ್ವಕಾಲಗಳಲ್ಲಿಯೂ ಮಾನ್ಯತೆಯನ್ನು ಪಡೆದಿದೆ. ಏಕೆಂದರೆ ಅದು ಮಾತ್ರವೇ ಯೋಗ, ಭಕ್ತಿ, ಜ್ಞಾನ, ಕರ್ಮ ಇವುಗಳ ಮೂಲಕ**